ಕರ್ನಾಟಕ ಸರ್ಕಾರ

GOVERNMENT OF KARNATAKA

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

KARNATAKA STATE RURAL DEVELOPMENT AND PANCHAYAT RAJ UNIVERSITY, GADAG

ಸಂ:ಕರಾಗ್ರಾಅಪರಾವಿವಿ/ಪಪ್ರ/2017-18 ದಿನಾಂಕ: 28-08-2017

## ಪತ್ರಿಕಾ ಪ್ರಕಟಣೆ

## ಪ್ರಥಮ ವರ್ಷದ ಸ್ನಾತಕೋತ್ತರ ತರಗತಿಗಳ ಪ್ರಾರಂಭ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ 2017-18ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಮೊದಲ ವರ್ಷದ ತರಗತಿಗಳು ದಿನಾಂಕ: 28 ಅಗಸ್ಟ 2017 ರಿಂದ ಪ್ರಾರಂಭವಾದವು. ಈ ಸಾಲಿನಲ್ಲಿ ಒಟ್ಟು ಐದು ಸ್ನಾತಕೋತ್ತರ ಕೋರ್ಸ್‌ಗಳಿಗೆ ಇದುವರೆಗು ಸುಮಾರು 100 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಇವರಲ್ಲಿ 22 ಬಾಲಕಿಯರಿದ್ದಾರೆ. ಎಂ.ಬಿ.ಎ ಗ್ರಾಮೀಣ ನಿರ್ವಹಣೆ (ಕೃಷಿ ವ್ಯವಹಾರ ನಿರ್ವಹಣೆ, ಗ್ರಾಮೀಣಾಭಿವೃದ್ಧಿ ನಿರ್ವಹಣೆ ಹಾಗೂ ಗ್ರಾಮೀಣ ಉದ್ಯಮಶೀಲತಾ ನಿರ್ವಹಣೆ) ಕೋರ್ಸಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (KEA) ಅಭ್ಯರ್ಥಿಗಳನ್ನು ಕಳುಹಿಸಬೇಕಿದೆ. ಈಗಾಗಲೇ ಪ್ರವೇಶ ಪಡೆದಿರುವ ಎಲ್ಲ ವಿದ್ಯಾರ್ಥಿಗಳಿಗೆ ಪ್ರಾರಂಭದ ದಿನದಂದು ಸ್ವಾಗತ ಮತ್ತು ಒಂದು ಕಾರ್ಯಾಗಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ರೈತ ಭವನದಲ್ಲಿರುವ ಮಹಾತ್ಮಾ ಗಾಂಧಿ ಪುತ್ಥಳಿಕೆಗೆ ಪುಷ್ಪನಮನ ಅರ್ಪಿಸುವುದರ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ತರಗತಿಗಳನ್ನು ಪರಿಣಾಮಕಾರಿಯಾಗಿ ನಡೆಸಲು ವಿಶ್ವವಿದ್ಯಾಲಯ ಈಗಾಗಲೇ ಆರು ಜನ ಹಿರಿಯ ತಜ್ಞರನ್ನು ಸಂದರ್ಶಕ/ಗೌರವ ಪ್ರಾಧ್ಯಾಪಕರನ್ನಾಗಿ, ಅಗತ್ಯವಾದ ಆತಿಥಿ ಉಪನ್ಯಾಸಕರನ್ನು ಮತ್ತು ಒಬ್ಬ ಗ್ರಂಥಪಾಲಕರನ್ನು ನೇಮಕ ಮಾಡಿಕೊಂಡಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕುಲಪತಿಗಳಾದ ಪ್ರೋ. ಬಿ. ತಿಮ್ಮೇಗೌಡ ಅವರು ದೇಶದಲ್ಲೇ ಪ್ರಥಮವೆಂದು ಪ್ರಾರಂಭವಾಗಿರುವ ಈ ವಿಶ್ವವಿದ್ಯಾಲಯದ ಸ್ಥಾಪನೆಗೆ ಬೆಂಬಲಿಸಿದ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ, ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣೀಕರ್ತರಾದ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಂತ್ರಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಹೆಚ್. ಕೆ. ಪಾಟೀಲ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳ ಪ್ರಯತ್ನಗಳು ಮತ್ತು ಪ್ರೋತ್ಸಾಹಕ್ಕೆ ಕೃತಜ್ಞತೆ ಸಲ್ಲಿಸಿದರು. ಮಹಾತ್ಮಾ ಗಾಂಧಿಯವರು ಕಂಡ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಸಾಕಾರವಾಗಿಸುವ ನಿಟ್ಟಿನಲ್ಲಿ ಈ ವಿಶ್ವವಿದ್ಯಾಲಯವನ್ನು ಬೆಳೆಸಬೇಕೆಂದು ಆಶಿಸಿದರು. ಮುಂದುವರೆದು ವಿಶ್ವವಿದ್ಯಾಲಯವನ್ನು ಔಪಚಾರಿಕವಾಗಿ ಘನತವೆತ್ತ ರಾಜ್ಯಪಾಲರು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಮುಂದಿನ ದಿನಗಳಲ್ಲಿ ಉದ್ಘಾಟಿಸಲ್ಲಿದ್ದಾರೆಂದು ತಿಳಿಸಿದರು.

ಪ್ರೋ. ಡಾ॥ ಸುರೇಶ ವ್ಹಿ. ನಾಡಗೌಡರ, ಕುಲಸಚಿವರು, ವಿಶ್ವವಿದ್ಯಾಲಯದ ಪರಿಚಯ ಮತ್ತು ಸ್ಥಾಪನೆಯ ಬಗ್ಗೆ ವಿವರಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕ ವರ್ಗ, ಪೋಷಕರು, ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದ ಇತರ ಅಧಿಕಾರಿಗಳು, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕುಲಸಚಿವರು

ಗೆ,

ಸಂಪಾದಕರು: -ಮೇಲಿನ ಪ್ರಕಟಣೆಯನ್ನು ಸುದ್ದಿಯನ್ನಾಗಿ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ವಿನಂತಿ.